# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 6 (08)

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 27.01.2026

ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ನಗರದ ರಸ್ತೆಗಳಲ್ಲಿ ಬ್ಯಾನರ್ ಅಳವಡಿಸಲು ಇರುವ ನಿಯಮಗಳೇನು: (ವಿವರ ನೀಡುವುದು): | ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರಡಿ ಕಲ್ಪಿಸಲಾದ ಅವಕಾಶಗಳಂತೆ ಜಾಹಿರಾತು ಪ್ರದರ್ಶನ ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ.<br><br>ಜಾಹಿರಾತು ತೆರಿಗೆ ವಿಧಿಸುವ ಅವಕಾಶ ಕಲ್ಪಿಸಲಾದ ಪ್ರಕರಣಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ನಿಯಮ ಮತ್ತು ಉಪವಿಧಿಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದುಗೊಳಿಸಿರುತ್ತದೆ. ಈ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ದಾವೆ ಸಂಖ್ಯೆ: 415/2025 ನ್ನು ದಾಖಲಿಸಲಾಗಿದೆ. |
| (ಆ) | ಬಳ್ಳಾರಿ ಬ್ಯಾನರ್ ವಿಷಯದಲ್ಲಾದ ಗಲಾಟೆಗೆ ಇಲಾಖೆಯ ಬೇಜವಾಬ್ದಾರಿ ಕಾರಣ ಎಂಬುದರ ಕುರಿತು ಸರ್ಕಾರದ ನಿಲುವೇನು: (ವಿವರ ನೀಡುವುದು); | ಬಳ್ಳಾರಿಯಲ್ಲಿ ನಡೆದ ಗಲಾಟೆಗೆ ನಗರಾಭಿವೃದ್ಧಿ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ. |
| (ಇ) | ಬ್ಯಾನರ್, ಪೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸುವಾಗ ಇಲಾಖೆಯಿಂದ ಶುಲ್ಕ ಸಂಗ್ರಹಿಸಲಾಗುತ್ತಿದೆಯೇ, ಇಲ್ಲವಾದಲ್ಲಿ ಸಂಗ್ರಹಿಸದಿರಲು ಕಾರಣವೇನು: | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ಖಾಸಗಿ ಜಾಗಗಳಲ್ಲಿ ಅಳವಡಿಸಲಾಗುತ್ತಿರುವ ಜಾಹೀರಾತು ಫಲಕಗಳಿಗೆ ವಿಧಿಸಲಾಗುತ್ತಿರುವ ತೆರಿಗೆ ಅಥವಾ ಶುಲ್ಕಕ್ಕೆ ಸಂಬಂಧಿಸಿದಂತೆ ರಿಟ್ ಪಿಟಿಷನ್ ನಂ. 9936/2019 (LB-RES) ಹಾಗೂ ರಿಟ್ ಪಿಟಿಷನ್ ನಂ. 15016/2019 (LB-TAX) ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 30-11-2022 ರಂದು ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತದೆ.<br><br>(ii) The provisions of Section 103(b) (vi) and Section 134 of the Municipal Corporation Act 1976 providing power to the Municipal Corporation to levy tax on advertisement is declared unconstitutional and void and the same are struck down.<br><br>(iii) Consequently the words "after the levy of the tax and that Section 134 has been determined by the Corporation "found in Sections 135(1), 135(2)(ii) ,135(3), 139 and Schedule VIII to the Municipal Corporation Act, 1976 and the Rules/Bye laws framed by the Municipal Corporations in the State pursuant to the said provision is also declared unconstitutional and void and the same to the said extent are struck down.<br><br>(iv)Similarly, Section 94(1)(b)(Xiii) including explanation thereto, Section 94(1-B) and the words "after the levy of tax under Section 94 has been determined by the Municipal Council "in Section 133(1),Section (2) (ii),Section 133(3) proviso (iv) to Section 142, Section 324(1) (ff) and Schedule VII ti the |

| | | |
|---|---|---|
| | | Karnataka Muicipalities Act 1964 along with rules framed by the Municipalities in the State pursuant to the said provisions are declared unconstitutional and to that extent are struck down.<br>ಸದರಿ ಆದೇಶಗಳನ್ನು ಪಾಲನೆ ಮಾಡಬೇಕಾಗುವುದರಿಂದ ಕಾಯ್ದೆಗಳಿಗೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. |
| (ಈ) | ಅಳವಡಿಸಲಾದ ಬ್ಯಾನರ್, ಫ್ಲೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಪೌರ ಕಾರ್ಮಿಕರಿಗೆ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡುವ ಕುರಿತು ಸರ್ಕಾರದ ನಿಲುವೇನು: (ವಿವರ ನೀಡುವುದು); | ಬ್ಯಾನರ್-ಫ್ಲೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಪೌರ ಕಾರ್ಮಿಕರಿಗೆ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| (ಉ) | ಅನುಮತಿ ಪಡೆಯದೆ ಅಕ್ರಮವಾಗಿ ಬ್ಯಾನರ್, ಫ್ಲೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸುವವರ ಮೇಲೆ ಕೈಗೊಂಡ ಕ್ರಮಗಳೇನು: ಈ ಅಕ್ರಮಗಳಿಗೆ ಭಾರಿ ಪ್ರಮಾಣದ ದಂಡ ವಿಧಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು); | ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಸೆಕ್ಷನ್ 138 ಅನಧಿಕೃತ ಜಾಹಿರಾತನ್ನು ಅಳವಡಿಸಿದ್ದಲ್ಲಿ ಅಂತಹ ಜಾಹಿರಾತನ್ನು ತೆರವುಗೊಳಿಸಲು ಸಂಬಂಧಿಸಿದ ಪಾಲಿಕೆಯ ಆಯುಕ್ತರಿಗೆ ಅಧಿಕಾರ ಇರುತ್ತದೆ.<br>ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) ಅಧಿನಿಯಮ 1981 ರ ಪ್ರಕರಣ 3 ರಲ್ಲಿ ಜಾಹಿರಾತುಗಳ ಮೂಲಕ ಅನಧಿಕೃತವಾಗಿ ಸಾರ್ವಜನಿಕ ದೃಷ್ಟಿಗೆ ಒಳಗಾಗಿರುವ ಯಾವುದೇ ಸ್ಥಳಗಳ ಮೇಲೆ ಅಂಟಿಸಿದರೆ/ ನಿಲ್ಲಿಸಿದರೆ/ ಪ್ರದರ್ಶಿಸಿದರೆ ಅಂತಹ ವ್ಯಕ್ತಿಗಳಿಗೆ 6 ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾಗೃಹ ವಾಸ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡನ್ನೂ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.<br>ಈ ಅಕ್ರಮಗಳಿಗೆ ಭಾರಿ ಪ್ರಮಾಣದ ದಂಡ ವಿಧಿಸುವ ಪ್ರಸ್ತಾಪ ಇರುವುದಿಲ್ಲ. |

**ನಅಇ 9 ಎಬಿಸಿ 2026(ಇ)**

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.